# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1193
2. ಸದಸ್ಯರ ಹೆಸರು : ಶ್ರೀ.ಬಿ.ಜಿ.ಪಾಟೀಲ್
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿಯಲ್ಲಿ ತೊಗರಿ ಟೆಕ್ನಾಲಜಿ ಪಾರ್ಕ್ ಎಷ್ಟು ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ; (ಸಂಕ್ಷಿಪ್ತ ವಿವರ ನೀಡುವುದು) | ಕಲಬುರಗಿಯಲ್ಲಿ ತೊಗರಿ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಸಂಬಂಧ 250 ಎಕರೆ ಜಮೀನನ್ನು, ಕೆ.ಐ.ಎ.ಡಿ.ಬಿ.ಯ ಮೂಲಕ ಪಡೆಯಲು ಕ್ರಮ ವಹಿಸಲಾಗಿತ್ತು. ಆದರೆ ಕೆ.ಐ.ಎ.ಡಿ.ಬಿ.ಯು ನಂತರದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟ ಹಿನ್ನೆಲೆಯಲ್ಲಿ ಸೂಕ್ತ ಜಮೀನು ದೊರೆತಿರುವುದಿಲ್ಲ. ಸೂಕ್ತ ಜಮೀನು ದೊರೆಯದ ಹಿನ್ನೆಲೆಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ.<br><br>ಪ್ರಸ್ತುತ ತೊಗರಿ ಟೆಕ್ನಾಲಜಿ ಪಾರ್ಕ್ ಯೋಜನೆಯ ಅನುಷ್ಠಾನವನ್ನು ಕೈಬಿಡಲಾಗಿರುತ್ತದೆ. |
| ಆ | ಸದರಿ ಯೋಜನೆಗೆ ಅವಶ್ಯಕತೆ ಇದ್ದ ಭೂಮಿಯನ್ನು ಕೆ.ಐ.ಎ.ಡಿ.ಬಿ. ಮೂಲಕ ಎಷ್ಟು ಜಮೀನನ್ನು ಇಲ್ಲಿಯವರೆಗೂ ವಶಪಡಿಸಿಕೊಳ್ಳಲಾಗಿದೆ; (ವಿವರ ನೀಡುವುದು) | |
| ಇ | ಸದರಿ ಯೋಜನೆಯ ಸಂಪೂರ್ಣ ಮಾಹಿತಿ ಹಾಗೂ ತಗುಲಿದ ವೆಚ್ಚ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಸೂಕ್ತ ಜಮೀನು ಲಭ್ಯವಾಗದ ಕಾರಣ, ಯೋಜನೆಯ ಅನುಷ್ಠಾನವನ್ನು ಕೈಬಿಟ್ಟು, ಕೆ.ಐ.ಎ.ಡಿ.ಬಿ.ಯಲ್ಲಿ ಭೂಸ್ವಾಧೀನಕ್ಕಾಗಿ ಠೇವಣಿ ಇಡಲಾಗಿದ್ದ ಮೊತ್ತ ರೂ.489.50 ಲಕ್ಷ ಮೊತ್ತವನ್ನು ಹಿಂಪಡೆದು ಈಗಾಗಲೇ ಅಧ್ಯರ್ಪಣೆ (ಸರೆಂಡರ್) ಮಾಡಲಾಗಿರುತ್ತದೆ. |

**ಸಂಖ್ಯೆ:ಸಿಒ 97 ಎಂಆರ್‌ಇ 2021**

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು